ಡಾ.ಎಂ.ಪಿ.ಕರ್ಕಿ:- ಕೆ.ಎಸ್.ಆರ್.ಟಿ.ಸಿ.ಯವರು ಕುಮಟಾಕ್ಕೆ ಎರಡು ಹೊಸ ಬಸ್ ಹಾಕಿದ್ದಾರೆ. ಆದರೆ ಮಳೆಗಾಲದಲ್ಲಿ ನೀರು ಬಸ್ ಒಳಗೆ ಬರುತ್ತಿದೆ.

ಅಧ್ಯಕ್ಷರು:- ನಿಮ್ಮ ಪ್ರಶ್ನೆ ಏನೆಂಬುದು ಅರ್ಥವಾಗುವುದಿಲ್ಲ. ಅವರು ಬಸ್ ತಿಗಣೆ ಇರುತ್ತದೆಂದು ದೂರು ಕೊಡುತ್ತಾರೆ. ನೀವು ಮಳೆಗಾಲದಲ್ಲಿ ನೀರು ಬರುತ್ತದೆಂದು ಹೇಳುತ್ತಿದ್ದೀರಿ. ಮಳೆ ಇಲ್ಲದಿದ್ದರೆ ನೀರು ಹೇಗೆ ಬರತ್ತದೆ?

ಡಾ:ಎಂ.ಪಿ.ಕರ್ಕಿ:- ಹಳೆ ಬಸ್ ಆದರೆ ಪರವಾಗಿಲ್ಲ. ಅದು ಹೊಸ ಬಸ್. ಅದನ್ನು ಹಾಕಿ 15 ದಿವಸ ಆಯಿತು. ಆಗಲೇ ಸೋರುತ್ತಿದೆ.

ವಿಷಯ:- ಕುಂದಾಪುರ ಉಪವಿಭಾಗದ ಸಹಾಯಕ ನಿಬಂಧಕರ ಕಛೇರಿಗೆ ಬಂದಿರುವ ಮೇಲ್ಮನವಿಗಳ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 87 (301)

ಶ್ರೀ ಕೆ.ಪ್ರತಾಪಚಂದ್ರಶೆಟ್ಟಿ (ಕುಂದಾಪುರ):- ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ಕುಂದಾಪುರ ಉಪವಿಭಾಗದಲ್ಲಿ ಸಹಾಯಕ ನಿಬಂಧಕರ ಕಛೇರಿಯಲ್ಲಿ ಕಳೆದ 3 ವರ್ಷಗಳಿಂದ ಮೇಲ್ಮನವಿಗೆ ಬಂದ ಅರ್ಜಿಗಳೆಷ್ಟು?

2) ಅವುಗಳಲ್ಲಿ ಎಷ್ಟು ತೀರ್ಮಾನವಾಗಿರುತ್ತವೆ. ಹಾಗೂ ಎಷ್ಟು ಬಾಕಿ ಇರುತ್ತವೆ. ಬಾಕಿ ಇರುವ ಮೇಲ್ಮನವಿಗಳೆಷ್ಟು? ತೀರ್ಮಾನವಾಗದಿರಲು ಕಾರಣವೇನು?

ಶ್ರೀ ಎಸ್.ಎಸ್.ಪಾಟೀಲ್ (ಸಹಕಾರ ಸಚಿವರು):-

1) ಮೇಲ್ಮನವಿಗಳು ಯಾವುದು ಬಂದಿರುವುದಿಲ್ಲ. ಕಾರಣ ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959ರ ರೀತ್ಯಾ ಸಹಕಾರ ಸಂಘಗಳ ಸಹಾಯಕ ನಿಬಂಧಕರಿಗೆ ಮೇಲ್ಮನವಿಯನ್ನು ಸ್ವೀಕರಿಸಿ ಇತ್ಯರ್ಥ ಮಾಡುವ ಅಧಿಕಾರವು ದತ್ತವಾಗಿರುವುದಿಲ್ಲ. ಆದರೆ ಸಹಕಾರ ಸಂಘಗಳ ಕಾಯ್ದೆ ಪ್ರಕಾರ ಕಲಂ 70ರನ್ವಯ ವಿವಾದ ಪ್ರಕರಣಗಳನ್ನು, ಕಲಂ 69ರ ಅನ್ವಯ ಅಧಿಭಾರ ಪ್ರಕರಣಗಳನ್ನು ಮತ್ತು ಕಲಂ 126ಎ-29ಸಿ ಪ್ರಕಾರ ಅರ್ಜಿಗಳನ್ನು ಸ್ವೀಕರಿಸಿ ಇತ್ಯರ್ಥಪಡಿಸುವ ಅಧಿಕಾರವು ದತ್ತವಾಗಿರುತ್ತದೆ. ಅದರಂತೆ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಕುಂದಾಪುರ ಇವರು ಕಳೆದ 3 ವರ್ಷಗಳಲ್ಲಿ ಸ್ವೀಕರಿಸಿ ಇತ್ಯರ್ಥಪಡಿಸಿರುವ ಪ್ರಕರಣಗಳ ವಿವರ - ಈ ಕೆಳಕಂಡಂತಿವೆ.

ವಿವರ	ಕಲಂ 69	ಕಲಂ 70 126 ಎ	ಕಲಂ 29ಸಿ
ದಿನಾಂಕ: 1-4-93ಕ್ಕೆ ಬಾಕಿ ಇದ್ದ ಪ್ರಕರಣಗಳು	10	2,071	-
ಕಳೆದ 3 ವರ್ಷಗಳಲ್ಲಿ (1993-94ರಿಂದ 1995-96ರವರೆಗೆ) ಸ್ವೀಕರಿಸಿದ ಪ್ರಕರಣಗಳು	-	4,926	6

2) ಮೇಲ್ಕನವಿ ಸ್ವೀಕರಿಸಿ ಇತ್ಯರ್ಥಗೊಳಿಸುವ ಅಧಿಕಾರವು ಸಹಾಯಕ ನಿಬಂಧಕರಿಗೆ ದತ್ತವಾಗಿಲ್ಲದ ಕಾರಣ ಈ ಪ್ರಶ್ನೆಯು ಉದ್ಭವಿಸುವುದಿಲ್ಲ. ಸಹಕಾರ ಸಂಘಗಳ ಕಾಯಿದೆ 1959ರ ಕಲಂ 69, 70 ಹಾಗೂ 29 ಸಿ, 126 ಎ ಪ್ರಕಾರ ತೀರ್ಮಾನವಾಗಿರುವ ಪ್ರಕರಣಗಳು ಈ ಕೆಳಕಂಡಂತಿವೆ.

	ವಿಲೇವಾರಿ ಮಾಡಿದ ಪ್ರಕರಣಗಳ ಸಂಖ್ಯೆ	ಬಾಕಿ ಇರುವ ಪ್ರಕರಣಗಳ ಸಂಖ್ಯೆ
ಕಲಂ 70ರನ್ವಯ ತೀರ್ಮಾನವಾದ ಪ್ರಕರಣಗಳು.	6,511	486
ಕಲಂ 69ರನ್ವಯ ತೀರ್ಮಾನವಾದ ಪ್ರಕರಣಗಳು.	8	2
ಕಲಂ 29ಸಿ ಹಾಗೂ 126 ಎರನ್ವಯ ತೀರ್ಮಾನವಾದ ಪ್ರಕರಣಗಳು.	6	-

ಕಲಂ 69ರನ್ವಯ ಅಧಿಭಾರ ಅರ್ಜಿಗಳು ಮತ್ತು ಕಲಂ 70ರನ್ವಯ ವಿವಾದದ ಪ್ರಕರಣಗಳು ಅರೆ ನ್ಯಾಯಿಕ ಸ್ವರೂಪದ್ದಾಗಿದ್ದು, ಸಿವಿಲ್ ನ್ಯಾಯಾಲಯಗಳು ಅನುಸರಿಸಬೇಕಾದ ನಡವಳಿಕೆಗಳನ್ನು ಅನುಸರಿಸಬೇಕಾಗುತ್ತದೆ. ಕಾನೂನಿನ ರೀತ್ಯಾ ವಾದಿ ಮತ್ತು ಪ್ರತಿವಾದಿಗಳು ತಮ್ಮ ವಾದವನ್ನು ಸಮರ್ಥಿಸಿಕೊಳ್ಳಲು ಅವಕಾಶಕೊಟ್ಟು ನ್ಯಾಯವಾದಿಗಳು ಹಾಜರಾದ ಪ್ರಕರಣಗಳಲ್ಲಿ ವಾದವಿವಾದಗಳನ್ನು ಕೇಳಿ ಸ್ವಾಭಾವಿಕ ಸಿದ್ಧ ನ್ಯಾಯಕ್ಕನುಗುಣವಾಗಿ ಪ್ರಕರಣವನ್ನು ತೀರ್ಮಾನಿಸಬೇಕಾಗಿರುವುದರಿಂದ

ಮೇಲಿನಂತೆ ಪ್ರಕರಣಗಳು ಬಾಕಿ ಇರುತ್ತವೆ.

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:- ಮಾನ್ಯ ಅಧ್ಯಕ್ಷರೇ, ನಾನು ಕೇಳಿರುವ ಪ್ರಶ್ನೆ ಈ ಮೇಲ್ಮನವಿಗಳು ಎನ್ನುವ ವಿಚಾರವನ್ನು ಹೇಳಿದ್ದೆ. ಬಹುಶಃ ಅದು ತಪ್ಪಾಗಿ ಅರ್ಜಿಗಳು ಎಷ್ಟು ಬಂದಿದೆ ಎಂದು ನಾನು ಕೇಳಬೇಕಾಗಿತ್ತು. ಅದೇ ರೀತಿ ಕಳೆದ ಮೂರು ವರ್ಷಗಳಿಂದ 486 ಅರ್ಜಿಗಳು ವಿಲೇವಾರಿಯಾಗಲಿಕ್ಕೆ ಬಾಕಿ ಇದೆ. ಅದರರ್ಥ ಕಡಿಮೆ ಸಂಖ್ಯೆಯಲ್ಲ. ತೀರ್ಮಾನ ಆಗತಕ್ಕಂಥದ್ದು ವಿಳಂಬವಾಗುವುದಕ್ಕೆ ಕಾರಣವೇನು? ಬಹುಶಃ ತಾವು ಬೇರೆ ಬೇರೆ ಕಾರಣಗಳನ್ನು ಕೊಟ್ಟಿದ್ದೀರಿ, ಅವರು ಕೋರ್ಟಿಗೆ ಹೋಗುತ್ತಾರೆ, ಬೇರೆ ಬೇರೆ ಸಮಸ್ಯೆಗಳಿವೆ ಎಂದು ತಾವು ಉತ್ತರ ಕೊಟ್ಟಿದ್ದೀರಿ. ಆದರೆ ತುರ್ತು ನ್ಯಾಯ ಸಿಗಲಿಕ್ಕೆ ತಾವು ಕ್ರಮ ಕೈಗೊಳ್ಳಬೇಕು ಎನ್ನುವುದು ನನ್ನ ಪ್ರಶ್ನೆ.

ಶ್ರೀ ಎಸ್.ಎಸ್.ಪಾಟೀಲ್:- ಮಾನ್ಯ ಅಧ್ಯಕ್ಷರೇ ತುರ್ತು ನ್ಯಾಯ ಸಿಗಲಿಕ್ಕೆ ಮಾನ್ಯ ಸದಸ್ಯರ ಭಾವನೆಯಂತೆ ಕ್ರಮ ಕೈಗೊಳ್ಳುತ್ತೇನೆ.

ವಿಷಯ:- ರಾಜ್ಯದಲ್ಲಿ ಅಂಡರ್ ವ್ಯಾಲ್ಯುಯೇಶನ್ ಪ್ರಕರಣದ ಸಂಖ್ಯೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 88 (372)

ಶ್ರೀ ಗೋವಿಂದ ಎಂ.ಕಾರಜೋಳ (ಮುಧೋಳ):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಕಳೆದ 5 ವರ್ಷಗಳಿಂದ ರಾಜ್ಯದಲ್ಲಿ ಸರ್ಕಾರದವರ ಗಮನಕ್ಕೆ ಬಂದ ಅಂಡರ್ ವ್ಯಾಲ್ಯುಯೇಶನ್ ಪ್ರಕರಣಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಪ್ರತ್ಯೇಕ ವಿವರ ಒದಗಿಸುವುದು)

ಆ) ಒಂದು ವರ್ಷದ ಅವಧಿಗಿಂತಲೂ ಹೆಚ್ಚು ಇತ್ಯರ್ಥವಾಗದೇ ಬಾಕಿ ಇರುವ ಪ್ರಕರಣಗಳ ಸಂಖ್ಯೆ ಎಷ್ಟು?

ಇ) ಈ ವಿಳಂಬಕ್ಕೆ ಕಾರಣವೇನು?

ಈ) ಇಂತಹ ಪ್ರಕರಣಗಳನ್ನು ಇತ್ಯರ್ಥ ಮಾಡುವ ಅವಧಿ ನಿಗದಿ ಮಾಡಲು ಸರ್ಕಾರಕ್ಕೆ ಇರುವ ತೊಂದರೆಗಳೇನು?

ಶ್ರೀ ರಮೇಶ್ ಸಿ.ಜಿಗಜಿಣಗಿ (ಕಂದಾಯ ಸಚಿವರು):-

ಅ) 99,656. ಕಳೆದ 5 ವರ್ಷಗಳ ಅಂಡರ್ ವ್ಯಾಲ್ಯುಯೇಷನ್ ಪ್ರಕರಣಗಳ ಜಿಲ್ಲಾವಾರು ವಿವರ ಈ ಕೆಳಕಂಡಂತಿದೆ.